**ಕರ್ನಾಟಕ ಸರ್ಕಾರ**
**ಮೀನುಗಾರಿಕೆ ಇಲಾಖೆ**

ಸಂ: ಮೀನಿ/105/ಸಿಬ್ಬಂದಿ/1/2019.

ಮೀನುಗಾರಿಕೆ ನಿರ್ದೇಶನಾಲಯ,
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಕೇಂದ್ರ, ಡಾ॥ಅಂಬೇಡ್ಕರ್ ವೀಧಿ
ಬೆಂಗಳೂರು-01, ದಿನಾಂಕ:06-06-2019

## ಅಧಿಸೂಚನೆ

**ವಿಷಯ:** ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿ:10.05.2019 ರ ತೀರ್ಪಿನನ್ವಯ ಮೀನುಗಾರಿಕೆ ಇಲಾಖೆಯ ಹೈದರಾಬಾದ್ ಕರ್ನಾಟಕ ಪ್ರಾಂತ್ಯದ ಶೀಘ್ರಲಿಪಿಗಾರರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ

**ಉಲ್ಲೇಖ:** 1) ಸರ್ಕಾರದ ಆದೇಶ ಸಂಖ್ಯೆ:ಡಿಪಿಎಆರ್:182:ಎಸ್‌ಟಿಆರ್:2011:ಬೆಂಗಳೂರು ದಿನಾಂಕ:06.05.2017.
2) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ರವರ ಅಧಿಸೂಚನೆ ಸಂಖ್ಯೆ: ಮೀನಿ/110/ಸಿಬ್ಬಂದಿ(2)/2017, ದಿನಾಂಕ:28-11-2017
3) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:186:ಎಸ್‌ಆರ್‌ಎಸ್:2019 ದಿನಾಂಕ: 27.02.2019 ಮತ್ತು 15.05.2019

===

ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:27.04.1978 ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ:29:ಸಿಹಿಮ:1977ರ ಆದೇಶದನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿನ ವಿವಿಧ ವೃಂದದ ಹುದ್ದೆಗಳಿಗೆ ಮುಂಬಡ್ತಿಯಲ್ಲಿ ಮೀಸಲಾತಿಯನ್ನು ನೀಡಲಾಗುತ್ತಿದೆ. ಅದರಂತೆ, The Karnataka Determination of Seniority of the Government Servants promoted on the basis of Act 2002 ರ ಸೆಕ್ಷನ್ 4 ರನ್ವಯ ಮುಂಬಡ್ತಿ ಹೊಂದಿದ ವೃಂದದಲ್ಲಿ ಜೇಷ್ಠತೆಯನ್ನು ನಿಗದಿಪಡಿಸಲಾಗುತ್ತಿತ್ತು. ಆದರೆ, ಶ್ರೀ ಬಿ.ಕೆ ಪವಿತ್ರ ಮತ್ತು ಇತರರು ಪ್ರಕರಣಕ್ಕೆ ಸಂಬಂಧಿಸಿದಂತೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:09.02.2017ರ ತೀರ್ಪಿನನ್ವಯ The Karnataka Determination of Seniority of the Government Servants promoted on the basis of Reservation Act 2002 ರ ಸೆಕ್ಷನ್ 3 ಮತ್ತು 4ನ್ನು Ultra vires Articles 14 & 16 of the constitution ಎಂದು ಆದೇಶಿಸಿರುವುದರಿಂದ, ಉಲ್ಲೇಖ (1) ಸರ್ಕಾರದ ಆದೇಶದಲ್ಲಿ ಹೈದರಾಬಾದ್ ಕರ್ನಾಟಕ ಪ್ರಾಂತ್ಯದ ಎಲ್ಲಾ ವೃಂದದ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ನಿರ್ದೇಶನ ನೀಡಲಾಗಿತ್ತು. ಅದರಂತೆ, ಉಲ್ಲೇಖ (2) ಶೀಘ್ರಲಿಪಿಗಾರರ ವೃಂದದ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಿ ಹೊಸದಾಗಿ ಜೇಷ್ಠತಾ ಪಟ್ಟಿಯನ್ನು ಹೊರಡಿಸಲಾಗಿತ್ತು.

ಪ್ರಸ್ತುತ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:10.05.2019 ರಂದು ನೀಡಿದ ಅಂತಿಮ ತೀರ್ಪಿನನ್ವಯ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, ಸಂಖ್ಯೆ:21/2018, ರ (ಸಂಕ್ಷಿಪ್ತವಾಗಿ, 2017ರ ಅಧಿನಿಯಮ) ಸಿಂಧುತ್ವವನ್ನು ಎತ್ತಿ ಹಿಡಿದು ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ, ಉಲ್ಲೇಖ (3) ಸರ್ಕಾರದ ಆದೇಶಗಳನ್ವಯ ಹೈದರಾಬಾದ್ ಕರ್ನಾಟಕ ಪ್ರಾಂತ್ಯದ ಎಲ್ಲಾ ವೃಂದದ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲು ನಿರ್ದೇಶನ ನೀಡಲಾಗಿದೆ. ಅದರಂತೆ, ಶೀಘ್ರಲಿಪಿಗಾರರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ.

ತತ್ಸಂಬಂಧವಾಗಿ ಬಾಧಿತರಾದ ಅಧಿಕಾರಿಗಳು ಹೆಸರು, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ ಮತ್ತು ಜೇಷ್ಠತೆ ಕುರಿತಂತೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಪ್ರಕಟಿತ ದಿನಾಂಕದಿಂದ 15 ದಿವಸಗಳೊಳಗೆ ದಾಖಲೆಗಳೊಂದಿಗೆ ಮೇಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಬಹುದಾಗಿದೆ. ಒಂದು ವೇಳೆ ಯಾವುದೇ ಮನವಿ ಸ್ವೀಕೃತಗೊಳ್ಳದಿದ್ದಲ್ಲಿ ಸರಿಯಾಗಿದೆಯೆಂದು ಭಾವಿಸಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗುವುದು.

ಸದರಿ ಜೇಷ್ಠತ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಸಂಬಂಧ ಪಟ್ಟ ಅಧಿಕಾರಿಗಳಿಗೆ ಕಳುಹಿಸಿಕೊಡಲಾಗಿದೆ.

ಅಡಕ: ಮೇಲಿನಂತೆ

ಸಹಿ/-
ಮೀನುಗಾರಿಕೆ ನಿರ್ದೇಶಕರು.

ಗೆ,

ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳಿಗೆ /
**ಪ್ರತಿ: ಇಲಾಖಾ ವೆಬ್‌ಸೈಟ್‌ಗೆ** ಇಲಾಖಾ ಅಧಿಕಾರಿಗಳ ಮಾಹಿತಿಗಾಗಿ.

6/6/19
ಮೀನುಗಾರಿಕೆ ನಿರ್ದೇಶಕರ ಪರವಾಗಿ
7-6-19

ರದ ಆದೇಶ ಸಂಖ್ಯೆ:ಡಿಪಿಎಆರ್ 186 ಎಸ್‌ಆರ್‌ಆರ್ 2018 ಬೆಂಗಳೂರು ದಿ:27-2-2019 ಮತ್ತು15-5-2019 ರನ್ವಯ ದಿನಾಂಕ:27-04-1978 ರಿಂದ31-5-2019ರ ಅಂತ್ಯಕ್ಕಿದ್ದಂತೆ ಮೀನುಗಾರಿಕೆ ಇಲಾಖೆಯ ಹೈದರಾಬಾದ್ ಕರ್ನಾಟಕದ ರಾಜ್ಯಮಟ್ಟದ ಸ್ಥಳೀಯ ವೃಂದ/ಪ್ರಾದೇಶಿಕ ವೃಂದದ ಶೀಘ್ರಲಿಪಿಗಾರರ. ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿ

| ಕ್ರ.ಸಂ. | ಮೂಲ ಜೇಷ್ಠತಾ ಪಟ್ಟಿಯ ಕ್ರಮಾಂಕ | ಹೆಸರು ಶ್ರೀ / ಶ್ರೀಮತಿ | ಮೀಸಲಾತಿ | ನೇರ ನೇಮಕಾತಿ/ ಮುಂಬಡ್ತಿ | ಹುಟ್ಟಿದ ದಿನಾಂಕ | ಸೇವೆಗೆ ಸೇರಿದ ದಿನಾಂಕ | ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ | ನೇಮಕಾತಿಗೆ / ಜೇಷ್ಠತೆಗೆ ನೈಜವಾದ ಅರ್ಹತಾ ದಿನಾಂಕ | ಷರಾ |
|---|---|---|---|---|---|---|---|---|---|
| | | | | | | | | | |
| 1 | 22 | ರಾಜಣ್ಣ ಎಸ್ ಮಿತ್ರ | ಪ.ಪಂ | ನೇರ ನೇಮಕಾತಿ | 01.06.2014 | 04.08.2000 | 04.08.2000 | 04.08.2000 | |

6/6/19
ಮೀನುಗಾರಿಕೆ ನಿರ್ದೇಶಕರ ಪರವಾಗಿ
7-6-19